# <u>ಮುಳ್ಳು ಕೊನೆಯ ಮೇಲೆ</u>

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wordings in Ref. 1 above is considered here. There are minor variations in Ref. 2. They are not considered here. The singer has mostly followed wordings in Ref. 1.
4. **Note:** Explanations are taken from different websites and social media.

ರಾಗ ಘರಜು ಆದಿ ತಾಳ

ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ
ಎರಡು ತುಂಬದು ಒಂದು ತುಂಬಲೇ ಇಲ್ಲ || ಪ ||

ತುಂಬಲಿಲ್ಲದ ಕೆರೆಗೆ ಬಂದರು ಮೂವರು ಒಡ್ಡರು
ಇಬ್ಬರು ಕುಂಟರು ಒಬ್ಬಗೆ ಕಾಲೆ ಇಲ್ಲ || ೧ ||

ಕಾಲಿಲ್ಲದ ಒಡ್ಡಗೆ ಕೊಟ್ಟರು ಮೂರು ಎಮ್ಮೆಗಳ
ಎರಡು ಬರಡು ಒಂದಕ್ಕೆ ಕರುವೆ ಇಲ್ಲ || ೨ ||

ಕರುವಿಲ್ಲದ ಎಮ್ಮೆಗೆ ಕೊಟ್ಟರು ಮೂರು ಹೊನ್ನುಗಳ
ಎರಡು ಸವಕಲು ಒಂದು ಸಲ್ಲಲೇ ಇಲ್ಲ || ೩ ||

ಸಲ್ಲದಿದ್ದ ಹೊನ್ನಿಗೆ ಬಂದರು ಮೂವರು ನೋಟಗಾರರು
ಇಬ್ಬರು ಕುರುಡರು ಒಬ್ಬಗೆ ಕಣ್ಣೇ ಇಲ್ಲ || ೪ ||

ಕಣ್ಣಿಲ್ಲದ ನೋಟಗಾರಗೆ ಕೊಟ್ಟರು ಮೂರು ಊರುಗಳ
ಎರಡು ಹಾಳು ಒಂದಕ್ಕೆ ಒಕ್ಕಲೇ ಇಲ್ಲ || ೫ ||

ಒಕ್ಕಲಿಲ್ಲದ ಊರಿಗೆ ಬಂದರು ಮೂವರು ಕುಂಬಾರರು
ಇಬ್ಬರು ಚೊಂಚರು ಒಬ್ಬಗೆ ಕೈಯೇ ಇಲ್ಲ || ೬ ||

ಕೈಯಿಲ್ಲದ ಕುಂಬಾರನು ಮಾಡ್ಯಾನ ಮೂರು ಮಡಕೆಗಳ
ಎರಡು ಒಡಕ ಒಂದಕ್ಕೆ ಬುಡವೆ ಇಲ್ಲ || ೭ ||

ಬುಡವಿಲ್ಲದ ಮಡಕೆಗೆ ಹಾಕಿದರು ಮೂರು ಅಕ್ಕಿಕಾಳ
ಎರಡು ಬೇಯದು ಒಂದು ಬೇಯಲೇ ಇಲ್ಲ || ೮ ||

ಬೇಯಲಿಲ್ಲದ ಅಕ್ಕಿಗೆ ಬಂದರು ಮೂವರು ನೆಂಟರು
ಇಬ್ಬರು ಉಣ್ಣರು ಒಬ್ಬಗೆ ಹಸಿವೆ ಇಲ್ಲ || ೯ ||

ಹಸಿವಿಲ್ಲದ ನೆಂಟಗೆ ಕೊಟ್ಟರು ಮೂರು ಟೊಣಪೆಗಳ
ಎರಡು ಸೊಂಕವು ಒಂದು ತಾಕಲೇ ಇಲ್ಲ || ೧೦ ||

ತಾಕಲಿಲ್ಲದ ಟೊಣೆಪೆಗಳ ತಾಕಿಸಿ ಸದ್ಗತಿಯ
ನೀಯಬೇಕು ಪುರಂದರ ವಿಠ್ಠಲ ನೀನು || ೧೧ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮುಳ್ಳುಕೊನೆಯೆಂದರೆ ಅಣು ಪರಿಮಾಣದ ಜೀವ; ಅದರ ಮೇಲೆ ಮೂರು ಕೆರೆಗಳು ಲಿಂಗದೇಹ. ಅನಿರುದ್ಧದೇಹ (ತುಂಬಲಾರದವು) ಮತ್ತು ಸ್ಥೂಲದೇಹ (ತುಂಬಬಹುದಾದದ್ದು. ಸಾಧನೆಯಿಂದ; ಆದರೆ ಸಾಧನೆ ಮಾಡದೆ ತುಂಬಲಿಲ್ಲ). ಅಲ್ಲಿಗೆ ಬಂದ ಮೂವರು ಒಡ್ಡರು ಅವಸ್ಥಾತ್ರಯ, ಬಾಲ್ಯ, ಯೌವನ, ಮುಪ್ಪು; ಬಾಲ್ಯ ಮತ್ತು ಮುಪ್ಪುಗಳಲ್ಲಿ ಜ್ಞಾನಶಕ್ತಿಗಳ ಕೊರತೆಯಿದ್ದು ಕುಂಟರು; ಯೌವನದಲ್ಲಿ ವಿಷಯೋಪಭೋಗಗಳಿಂದಾಗಿ ಆಧ್ಯಾತ್ಮದ ಕಡೆ ಕಾಲು ಬರುವುದಿಲ್ಲ. ಯೌವನಾವಸ್ಥೆಯಲ್ಲಿ ಕೊಟ್ಟ ಮೂರು ಎಮ್ಮೆಗಳು ಏಷಣಾತ್ರಯ (ದಾರೈಷಣ, ಪುತ್ರೈಷಣ, ವಿತ್ತೈಷಣ). ಮೊದಲ ಎರಡು ವಿಷಣೆಗಳು ಅಧ್ಯಾತ್ಮ ಪ್ರತಿಬಂಧಿಗಳಾಗಿ ಬರಡು ಎಮ್ಮೆಗಳು; ವಿತ್ತೈಷಣವನ್ನು ಸರಿಯಾಗಿ ಮಾಡಿದರೆ ಸಾಧನೆಗೆ ನೆರವಾಗುತ್ತದೆ, ಹಾಗೆ ಮಾಡದಿದ್ದರೆ 'ಕರುವೇ ಇಲ್ಲ'. ವಿತ್ತೈಷಣಕ್ಕೆ ಕೊಟ್ಟ ಮೂರು ಹೊನ್ನು ದಾನ, ಭೋಗ, ನಾಶ ಎಂಬ ಹಣಕ್ಕಿರುವ ಮೂರು ದಾರಿಗಳು. ಭೋಗ ಮತ್ತು ನಾಶ ಸವಕಲು ನಾಣ್ಯಗಳು; ಅವುಗಳಿಗೆ ಬೆಲೆಯಿಲ್ಲ; ದಾನಕ್ಕೆ ಬೆಲೆಯುಂಟು, ಆದರೆ ದಾನ ಮಾಡಲಿಲ್ಲವಾಗಿ ಅದು ಸಲ್ಲಲಿಲ್ಲ. ದಾನಕ್ಕೆ ಬಂದವರೆಂದರೆ ಸಂಚಿತ,

ಆಗಾಮಿ, ಪ್ರಾರಬ್ಧಗಳೆಂಬ ಕರ್ಮ (ನೋಟಗಾರರು, ಕಾಲ ನೋಡಿ ಫಲ ಕೊಡುವವು). ಅವುಗಳಲ್ಲಿ ಸಂಚಿತ. ಆಗಾಮಿ ಎರಡೂ ಕಾಣಸಿಗುವುದಿಲ್ಲ (ಕುರುಡರು); ಪ್ರಾರಬ್ಧವು ಪ್ರಕೃತ ದೇಹಕ್ಕೂ ಭೋಗಕ್ಕೂ ಕಾರಣವಾದುದರಿಂದ ಕಂಡುಕೊಳ್ಳಬಹುದು, ಆದರೆ ವಿಷಯಸುಖದಲ್ಲಿ ತೊಡಗಿ ಅದನ್ನು ಕಾಣುವುದಿಲ್ಲ. ಪ್ರಾರಬ್ಧಕರ್ಮಕ್ಕೆ ಮೂರು ಊರುಗಳೆಂದರೆ ತ್ರಿಗುಣ (ಸತ್ತ್ವ, ರಜಸ್ಸು, ತಮಸ್ಸು); ಇವುಗಳಲ್ಲಿ ರಜಸ್ಸು, ತಮಸ್ಸು ಎರಡೂ ದುರ್ಗತಿಗೆ ಎಳೆಯುವುದರಿಂದ ಹಾಳು; ಸತ್ತ್ವದಿಂದ ಸದ್ಗತಿಯ ಸಂಭವವಿದ್ದರೂ ನಾವು ಅದನ್ನು ಎತ್ತಿ ನಿಲ್ಲಿಸದಿದ್ದರೆ 'ಒಕ್ಕಲೆ ಇಲ್ಲ.' ಸತ್ತ್ವಗುಣಕ್ಕೆ ಬಂದ ಮೂವರು ಕುಂಬಾರರು ಹರಿ, ಹರ. ವಿರಿಂಚಿಗಳು; ಹರನೂ ವಿರಿಂಚಿಯೂ ಅಸ್ವತಂತ್ರರಾಗಿ ಚೊಂಚರು (ಸೊಟ್ಟಗೈಯವರು). ಹರಿಯ ಸ್ವತಂತ್ರನಾದರೂ ನಮ್ಮಲ್ಲಿ ಮನಃಪ್ರಾವಣ್ಯ ಇಲ್ಲವಾಗಿ ಅವನಿಗೆ ಕೈಬಾರದು. ಹರಿಯಿಂದ ಸಿದ್ಧವಾದ ಮೂರು ಮಡಕೆಗಳು ಜ್ಞಾನ, ಭಕ್ತಿ, ವೈರಾಗ್ಯಗಳೆಂಬ ಮೋಕ್ಷೋಪಾಯಗಳು ಜೀವನಿಗೆ ತಾನಾಗಿ ಜ್ಞಾನ, ವೈರಾಗ್ಯಗಳು ಒದಗುವುದಿಲ್ಲವಾಗಿ ಅವು ಒಡಕು; ಭಕ್ತಿಗೆ ಹರಿಯ ಅನುಗ್ರಹವಿಲ್ಲದಾಗಿ ಬುಡವಿಲ್ಲ. ಭಕ್ತಿಗೆ ಹಾಕಿದ ಮೂರು ಅಕ್ಕಿಕಾಳುಗಳೆಂದರೆ ತ್ರಿವಿಧ ಭಕ್ತಿ (ಸಾತ್ತ್ವಿಕ, ರಾಜಸ, ತಾಮಸ). ಕಡೆಯೆರಡು ಕಾಮ್ಯ ಪ್ರಯೋಜನಾರ್ಥಿಯಾಗಿ ಬೇಯಲಾರವು; ಸಾತ್ತ್ವಿಕವೊಂದು ಬೇಯಬಲ್ಲುದು. ಆದರೆ ಹರಿಯ ಅನುಗ್ರಹವಿಲ್ಲದೆ ಬೇಯಲಿಲ್ಲ. ಸಾತ್ತ್ವಿಕ ಭಕ್ತಿಗೆ ಹೊಂದಿಕೊಂಡು ಬಂದ ಮೂವರು ನಂಟರು ತ್ರಿಕರಣ (ಮನೋ, ವಾಕ್, ಕಾಯ). ವಾಕ್ ಮತ್ತು ಕಾಯ ಇವೆರಡೂ ನೇರವಾಗಿ ಮುಕ್ತಿಗೆ ಸಾಧಕವಲ್ಲವಾದುದರಿಂದ 'ಉಣ್ಣರು'; ಮನಸ್ಸೊಂದು ಭಕ್ತಿಗೆ ಜೀವವನ್ನು ಒಯ್ಯಬಲ್ಲುದು, ಚಿತ್ ಸ್ವರೂಪವನ್ನು ಪಡೆದುಕೊಂಡು. ಆದರೆ ಹರಿಯಲ್ಲಿ ಮನಃಪ್ರಾವಣ್ಯ ಇಲ್ಲವಾಗಿ ಅದು 'ಹಸಿವಿಲ್ಲದ್ದು;' ಹಸಿವು ಎಂದರೆ ಮೋಕ್ಷದ ಅಪೇಕ್ಷೆ. ಮುಮುಕ್ಷುತ್ವ. ಮನಸ್ಸಿಗೆ ಕೊಟ್ಟ ಮೂರು ಪೆಟ್ಟುಗಳು (ಟೊಣಪೆಗಳು) ತ್ರಿವಿಧ ದುಃಖ (ಅತೀತ, ಅನಾಗತ, ವರ್ತಮಾನ). ಇವುಗಳಲ್ಲಿ ಅತೀತ ದುಃಖ ಮತ್ತು ಅನಾಗತ ದುಃಖ ಈಗ ಅನುಭವವಕ್ಕೆ ಬಾರವು ('ಎರಡು ತಾಕದು'). ವರ್ತಮಾನ ದುಃಖವೇನೋ ಅನುಭವಕ್ಕೆ ಬಂದು ವಿರಕ್ತಿಯನ್ನು ಹುಟ್ಟಿಸಿ ಭಕ್ತಿಗೆ ಎಡೆಮಾಡಿಕೊಡಬಲ್ಲದು; ಆದರೆ ಅಜ್ಞಾನದಿಂದ ಹಾಗಾಗಲಿಲ್ಲ ('ತಾಕಲೆ ಇಲ್ಲ'). ವರ್ತಮಾನ ದುಃಖವನ್ನು ಮನದಟ್ಟು ಮಾಡಿಸಿ ಸಂಸಾರವು ದುಃಖಮಯವಾದುದೆಂದೂ ಹೇಯವೆಂದೂ ಕಾಣಿಸುವಂತೆ ಮಾಡೆಂದೂ, ಹಾಗೆ ಬಂದ ವಿರಕ್ತಿಯಿಂದ ಭಕ್ತಿಯು ಬಲಿತು ಅಪರೋಕ್ಷಜ್ಞಾನ ಒದಗಲೆಂದೂ ಹರಿಯನ್ನು ಬೇಡಿಕೊಂಡಿದ್ದಾರೆ.

**Classification:** Mundige
**Ankita:** purandara vittala
**Location:** NA
**Category:** Mukti Marga, jeevanoddhara

**Group Words:** anu, mullu, kere, kalu, yemme, bangara, kuruda, hasive, oota, ooru, bandhu, mukti,

**Pravachana:** Kallapur Pavamanachar

**Explanation:** Keshava Rao, Tadapatri on dvaita.org